**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.**

| | |
|---|---|
| ಓ.ಎಸ್. ನಂ | **162/2017** |
| ಡಿ.ಡಬ್ಲ್ಯೂ | **01** |
| ದಿನಾಂಕ | **01.12.2021** |

**ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಶ್ರೀ ಕೆ.ಎನ್.ಎಸ್ ವಕೀಲರಿಂದ ವಾದಿ ಪರ.**

ನಾನು ಮತ್ತು ನನ್ನ ತಂದೆ ಒಟ್ಟಿಗೆ ವಾಸವಾಗಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ನಾನು ಒಂದೇ ಊರಿನಲ್ಲಿದ್ದೇವೆ, ಆದರೆ ತಂದೆಯ ಮನೆಯ ವಿಳಾಸ ತಿಳಿದಿಲ್ಲ. ನಾನು ಮತ್ತು ನನ್ನ ತಂದೆ ಕ್ರಯಪತ್ರ ಆಗಿರುವ ಸ್ವತ್ತಿನಲ್ಲಿಯೇ ಒಟ್ಟಿಗೆ ವಾಸವಾಗಿದ್ದೇವೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ತಂದೆಯ ನಡುವೆ ವಿಭಾಗ ಆಗಿರುವುದಿಲ್ಲ. ಸಾಕ್ಷಿಯು ಮುಂದುವರೆದು ಅದು ನನ್ನ ಸ್ವಯಾರ್ಜಿತ ಸ್ವತ್ತು ಮತ್ತು ಭಾಗ ಮಾಡಿಕೊಳ್ಳಲು ಯಾವುದೇ ಆಸ್ತಿ ಇಲ್ಲ ಎಂದು ನುಡಿಯುತ್ತಾರೆ. ನಿಡಿ 1ರ ದಾಖಲೆಯನ್ನು ನನ್ನ ತಮ್ಮನ ಮುಖಾಂತರ ತರಿಸಿಕೊಂಡಿರುತ್ತೇನೆ. ನಿಡಿ 2ನ್ನೂ ಸಹ ನನ್ನ ತಮ್ಮನಿಂದ ತರಿಸಿಕೊಂಡಿರುತ್ತೇನೆ. ವಾದಿಗೆ ಮೋಸ ಮಾಡಬೇಕು ಎಂಬ ಉದ್ದೇಶದಿಂದ ನಾನು ನನ್ನ ತಂದೆ ಶಾಮೀಲಾಗಿ ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ನಿಪಿ 6ರಲ್ಲಿ ರೂ.3 ಲಕ್ಷ ನಗದು ಪಡೆದು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಅದನ್ನು ಒಪ್ಪಿ ನನ್ನ ತಂದೆಯೂ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ವಾಸ ಮಾಡುತ್ತಿರುವ ಮನೆಯಲ್ಲಿಯೇ ಸದರಿ ದಾಖಲೆಗೆ ಸಹಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ 6ರ ಬಗ್ಗೆ ನಾನು ನನ್ನ ತಂದೆಗೆ ತಿಳಿಸಿರುವುದಿಲ್ಲ. ನಾನು ನನ್ನ ತಂದೆಯೊಂದಿಗೆ ಮಾತನಾಡುವುದಿಲ್ಲ, ಆದ್ದರಿಂದ ನನ್ನ ಪರವಾಗಿ ವಿಚಾರಣೆ ಮಾಡಿಸಲು ಆಗುವುದಿಲ್ಲ.

ಮೂಲಪತ್ರವನ್ನು ಹಾಜರುಪಡಿಸಿರುವುದಿಲ್ಲ. ಮೂಲಪತ್ರ ಬೇಕಾದರೆ ತಂದು ಕೊಡುತ್ತೇನೆ. ಮೂಲಪತ್ರ ಹಾಜರುಪಡಿಸಿದರೆ ಅದರಲ್ಲಿರುವ ಸಹಿಗಳ ಪರಿಶೀಲನೆಗೆ ಕಳುಹಿಸುತ್ತಾರೆ ಎಂದು ಹಾಜರುಪಡಿಸುತ್ತಿಲ್ಲ ಎಂದರೆ ಸರಿಯಲ್ಲ. ನಿಪಿ 6ನ್ನು ಬರೆದುಕೊಟ್ಟು ವಾದಿಯವರಿಗೆ ಮನೆಯನ್ನು ನೀಡಿಲ್ಲ ಹಾಗೂ ಹಣವನ್ನು ವಾಪಸ್ ನೀಡಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ನಿವೇಶನವನ್ನೇ ಖರೀದಿಸಿರಲಿಲ್ಲ ಇನ್ನು ಮನೆ ನೀಡುವ ಪ್ರಶ್ನೆ ಎಲ್ಲಿ ಎಂದು ನುಡಿಯುತ್ತಾರೆ. ನನ್ನ ಸ್ವತ್ತಿನ ಮೂಲ ಮಾಲೀಕರು ನನಗೆ ಸಂಬಂಧಿಕ

ರಾಗಿದ್ದರಿಂದ ಮೊದಲೇ ಅವರು ನನಗೆ ಮನೆಯನ್ನು ಕಟ್ಟಲು ಅನುಮತಿ ನೀಡಿದ್ದರು ಎಂದರೆ ಸರಿಯಲ್ಲ. ಹಣವನ್ನು ವಾಪಸ್ ನೀಡದೇ ಇರುವ ಕಾರಣಕ್ಕೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರರಿಗೆ ಓದಿ ಹೇಳಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾಯಿಕ.ದಂಡಾಧಿಕಾರಿಗಳು, ಆನೇಕಲ್.